ರಾಜ್ಯ ಸರಕಾರ ಎಷ್ಟೋ ಹಣ ಖರ್ಚು ಮಾಡಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಮಳೆ-ಬೆಳೆ ಬರದೇ ಈ ತರಹ ಆಗುತ್ತಿದೆ. ರೈತರ ದೃಷ್ಟಿಯಿಂದ ಇನ್ನೇನಾದರೂ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್ ಎ ರವೀಂದ್ರನಾಥ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ನಾವು ಸರ್ಕಾರದಿಂದ ಹಾಕಿಕೊಂಡಿದ್ದೇವೆ. ಅವೆಲ್ಲವನ್ನೂ ಸರಿಯಾದ ರೀತಿಯಲ್ಲಿ implement ಮಾಡುವಂಥ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಸೇತುವೆ ದುರಸ್ತಿ ಬಗ್ಗೆ

63(557) ಶ್ರೀ ನರೇಂದ್ರ ಆರ್:(ಹನೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು, ಸತ್ತೇಗಾಲದ ಬಳಿ ಕಾವೇರಿ ನದಿಗೆ ಕಟ್ಟಿರುವ ಸೇತುವೆಯು ದುರಸ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ದುರಸ್ತಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಹೊಸ ಸೇತುವೆ ನಿರ್ಮಾಣಕ್ಕೆ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) ಈ ಸೇತುವೆಯ ದುರಸ್ತಿಗಾಗಿ ವಾರ್ಷಿಕ ದುರಸ್ತಿ ಮತ್ತು ನಿರ್ವಹಣೆ (ಎಂ. ಅಂಡ್ ಆರ್) ಅನುದಾನ ಅಡಿಯಲ್ಲಿ ರೂ.3.00 ಲಕ್ಷಗಳು ಮಂಜೂರಾಗಿದ್ದು ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಇ) ಹೌದು.

ಈ) ರಾಷ್ಟ್ರೀಯ ಹೆದ್ದಾರಿ–209ನ್ನು ಕಿ.ಮೀ.265.800 (ಚಾಮರಾಜನಗರ ತಾಲ್ಲೂಕು, ತಮಿಳುನಾಡು ಗಡಿ)ಯಿಂದ ಕಿ.ಮೀ.469.320 (ಬೆಂಗಳೂರು)ವರೆಗೆ ಅಭಿವೃದ್ಧಿ ಕಾಮಗಾರಿಗಳನ್ನು NHDP-IV B ಅಡಿಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರವು ನಿರ್ಧರಿಸಿರುತ್ತದೆ. ಸದರಿ ಸೇತುವೆಯು ಮೇಲ್ಕಂಡ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗುವುದು. ಈ ಹೆದ್ದಾರಿಯ ಯೋಜನಾ ವರದಿಯನ್ನು ತಯಾರಿಸುವ ಕೆಲಸವು ಪ್ರಗತಿಯಲ್ಲಿರುತ್ತದೆ.

ಶ್ರೀ ನರೇಂದ್ರ ಆರ್ (ಹನೂರ್): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈ ಸೇತುವೆಯು ದುರಸ್ಥಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ದುರಸ್ಥಿಗೆ ತೆಗೆದುಕೊಂಡ ಕ್ರಮ ಏನೆಂದರೆ, 3 ಲಕ್ಷ ರೂಪಾಯಿಗಳನ್ನು ದುರಸ್ಥಿ ಮಾಡುವುದಕ್ಕೆ ಮಂಜೂರು ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ಸೇತುವೆಯನ್ನು 1932ರಲ್ಲಿ ನಿರ್ಮಾಣ ಮಾಡಲಾಗಿದೆ. ಆಗ 10 ಟನ್ capacity ಭಾರ ಹೊಂದುವಂಥ ಸಾಮರ್ಥ್ಯವನ್ನು ಈ ಸೇತುವೆ ಹೊಂದಿತ್ತು. ಆದರೆ ಈಗ ಮರಳು ಲಾರಿ ಹಾಗೂ ಕರಿ ಕಲ್ಲು 30–40 ಟನ್ ಸಾಮರ್ಥ್ಯವಿರುವಂಥ ಲಾರಿಗಳು ಚಲಿಸುತ್ತಿರುವುದರಿಂದ, ಸೇತುವೆಯು ಸುಮಾರು ಎರಡು ತಿಂಗಳಿಗೆ, ಮೂರು ತಿಂಗಳಿಗೆ ದುರಸ್ಥಿಯಾಗುತ್ತಿದೆ, ಗುಂಡಿ ಬೀಳುತ್ತಿವೆ. ಈಗ ಕೊಡತಕ್ಕಂಥ ಅನುದಾನ ಏನೇನು ಸಾಲುವುದಿಲ್ಲ. ಜೊತೆಗೆ ಈ ಸೇತುವೆಯಲ್ಲಿ 10 ಟನ್‌ಗಿಂಥ ಹೆಚ್ಚಿಗೆ ಭಾರ ಹೊಂದಿರುವಂಥ ವಾಹನಗಳನ್ನು ಓಡಾಡುವುದಕ್ಕೆ ಬಿಟ್ಟರೆ ತಕ್ಷಣದಲ್ಲಿಯೇ ಅದು ಕುಸಿದು ಹೋಗುವಂತಹ ಅಪಾಯವಿದೆ. ಆದುದರಿಂದ 10 ಟನ್‌ಗಿಂಥ ಹೆಚ್ಚಿಗೆ ಭಾರ ಇರುವಂಥ ವಾಹನಗಳಿಗೆ ನಿರ್ಬಂಧ ಹಾಕಿದರೆ ಮಾತ್ರ ಸೇತುವೆಯು ಸ್ವಲ್ಪ ದಿವಸ ಬಾಳಿಕೆ ಬರುತ್ತದೆ ಎಂದು ಸರ್ಕಾರದ ಗಮನಕ್ಕೆ ತರುತ್ತಾ ಆದಷ್ಟು ಬೇಗನೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿ ಹೊಸ ಸೇತುವೆಯನ್ನು ನಿರ್ಮಾಣ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ ಎಂ ಉದಾಸಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಇದು 1936ರಲ್ಲಿ ನಿರ್ಮಾಣವಾಗಿರುವಂಥ ಸೇತುವೆ, ಸೇತುವೆಯು 10 ಟನ್ ಪ್ರಮಾಣದ ಭಾರವನ್ನು ಹೊಂದುವ ಶಕ್ತಿ

ಇರುವುದರಿಂದ, 75 ವರ್ಷಗಳ ಹಳೆಯದಾದಂಥ ಸೇತುವೆಯಲ್ಲಿ ಬಹಳ ದುರಸ್ಥಿಯಾಗಿದೆ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ. ಇದಕ್ಕಾಗಿಯೇ ಕೇಂದ್ರ ಸರ್ಕಾರದವರು ರಾಷ್ಟ್ರೀಯ ಹೆದ್ದಾರಿ–209ನ್ನು Public-Private Participation (PPP) ಯೋಜನೆಯಡಿಯಲ್ಲಿ ತೆಗೆದುಕೊಳ್ಳುವಂಥ ಕಾರ್ಯಕ್ರಮವನ್ನು ಮಾಡಿದೆ. ಅತ್ಯಂತ ಶೀಘ್ರದಲ್ಲೇ ಯೋಜನೆಯನ್ನು ತಯಾರು ಮಾಡಿ, ಆ ಸೇತುವೆಯನ್ನು ನಿರ್ಮಾಣ ಮಾಡುವಂಥ ಕೆಲಸವಾಗುತ್ತದೆ. ಅಲ್ಲಿಯವರೆಗೆ ಅದರಲ್ಲಿ 10 ಟನ್‌ಗಿಂಥ ಹೆಚ್ಚು ಭಾರದ ವಾಹನಗಳನ್ನು ನಿಯಂತ್ರಣಗೊಳಿಸುವಂಥ ಕಾರ್ಯಕ್ರಮಗಳಿಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿ, ಆ ಕಾರ್ಯಕ್ರಮ ಜಾರಿಗೊಳಿಸುವಂತೆ ಮಾಡುತ್ತೇನೆ.

ಕೇಂದ್ರ ರಸ್ತೆ ನಿಧಿ ಬಗ್ಗೆ

65(315) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್‌ನಾಡಗೌಡ: (ಮುದ್ದೇಬಿಹಾಳ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಗೆ ಸಿ.ಆರ್.ಎಫ್. ಫಂಡ್‌ನಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲಾಗಿದೆ?

ಆ) ಮುದ್ದೇಬಿಹಾಳ ಮತಕ್ಷೇತ್ರಕ್ಕೆ ಸಿ.ಆರ್.ಎಫ್. ಫಂಡ್‌ನಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿದೆ?

ಇ) ಈ ಬಗ್ಗೆ ಸಕಾರದ ಮಾನದಂಡವೇನು?

ಈ) ಹಾಗಿದ್ದಲ್ಲಿ, ಸರ್ಕಾರ ಎಂದಿನಿಂದ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಬಿಜಾಪುರ ಜಿಲ್ಲಾ ವ್ಯಾಪ್ತಿಗೆ 2008–09ನೇ ಸಾಲಿನಲ್ಲಿ ಒಟ್ಟು 12 ಕಾಮಗಾರಿಗಳು ರೂ.14.70ಕೋಟಿ ಮೊತ್ತಕ್ಕೆ ಮಂಜೂರಾಗಿರುತ್ತದೆ.

ಆ) ಮುದ್ದೇಬಿಹಾಳ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಹಿರೇಮೂರ–ಹುನಕುಂಟ ರಸ್ತೆಯ ಕಿ.ಮೀ.0.00ರಿಂದ 9.00ರವರೆಗೆ ಅಭಿವೃದ್ಧಿಪಡಿಸುವ ಒಂದು ಕಾಮಗಾರಿಯು ರೂ.100 ಲಕ್ಷಗಳಿಗೆ ಮಂಜೂರಾಗಿರುತ್ತದೆ.